**ಓ.ಎಸ್.80/2022, ಡಿ.ಡಬ್ಲೂ-1 ಹೆಸರುಃ ಬಸಮ್ಮ**

**ದಿಃ24-02-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : ವಾದಿಯ ಪರ ಶ್ರೀ ಎನ್.ಹೆಚ್.ಎಸ್. ವಕೀಲರಿಂದಃ**

ನನ್ನ ತಂದೆ ಜೀವಂತ ಇದ್ದ ಕಾಲಕ್ಕೆ ದಾವಾ ಸ್ವತ್ತಿನ ಕುರಿತು ಹಾಗೂ ಮನೆಯ ಕುರಿತು ಯಾವುದೇ ಮರಣಶಾಸನ ಪತ್ರವನ್ನು ಮಾಡಿರಲಿಲ್ಲ. ನಾನು ಮತ್ತು ವಾದಿ ನನ್ನ ತಂದೆಗೆ ಸೇರಿದ ಮನೆಯನ್ನು ದಿನಾಂಕ 11.10.2010 ರಂದು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ಮನೆಯನ್ನು ನಮ್ಮ ಗ್ರಾಮದ ಶೇಖರಣ್ಣ ರವರಿಗೆ ರೂ.50,000/- ಗಳಿಗೆ ಮಾರಾಟ ಮಾಡಿದ್ದೆವು. ಸದರಿ ರೂ.50,000/- ಹಣವನ್ನು ನಾನೇ ಪಡೆದುಕೊಂಡಿದ್ದೇನೆ. ಮನೆಯಲ್ಲಿಯೇ ದಾಖಲಾತಿ ಮಾಡಿಕೊಂಡು ಮಾರಾಟ ಮಾಡಿದೆವು. ನೋಂದಣಿ ಮಾಡಿಸಿಲ್ಲ. ಮನೆಯನ್ನು ಮಾರಾಟ ಮಾಡಿದ ರೂ.50,000/- ಹಣದ ಪೈಕಿ ನಾನು ರೂ.25,000/- ತೆಗೆದುಕೊಂಡಿದ್ದು, ವಾದಿಗೆ ರೂ.25,000/- ಕೊಟ್ಟಿದ್ದೆನು ಎಂದರೆ ಸರಿಯಲ್ಲ. ನಾನು ಈ ವಿಚಾರವನ್ನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿಲ್ಲ. ಪ್ರತಿವಾದ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ.

2. 2015 ನೇ ಸಾಲಿನಲ್ಲಿ ನನ್ನ ಮಗ ಲಾರಿಯನ್ನು ಖರೀದಿಸಿದ್ದರು ಎಂದರೆ ಸರಿ. ಸದರಿ ಲಾರಿಯನ್ನು ಖರೀದಿಸಲು ನಾನು ಮತ್ತು ನನ್ನ ಅಕ್ಕ ಸೇರಿ ದಾವಾ ಅನುಸೂಚಿತ ಸ್ವತ್ತನ್ನು ಆಧಾರ ಮಾಡಿ ಸಾಲ ಕೊಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಕ್ಕ ಸೇರಿ ಆಧಾರ ಮಾಡಿ ಕೊಡಿಸಿದ್ದ ಸಾಲವನ್ನು ನನ್ನ ಮಗ ಈಗ ಮರುಪಾವತಿ ಮಾಡಿರುತ್ತಾನೆ ಎಂದರೆ ಸರಿಯಲ್ಲ.

3. ಮನೆಯನ್ನು ಮಾರಾಟ ಮಾಡುವಾಗ ನನ್ನ ಅಕ್ಕನ ಸಹಿಯನ್ನು ಪಡೆದುಕೊಂಡಿಲ್ಲ. ಮನೆಯನ್ನು ಮಾರಾಟ ಮಾಡಿದ ಕುರಿತಾಗಿ ದಾಖಲಾತಿಯ ಬಗ್ಗೆ ನನ್ನ ಮಗನಿಗೆ ಮಾಹಿತಿ ಇದೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಬಗ್ಗೆ ನನ್ನ ಮಗನಿಗೆ ಮಾಹಿತಿ ಇದೆ. ನನ್ನ ಮನೆಯ ಮತ್ತು ಜಮೀನಿನ ಎಲ್ಲಾ ವ್ಯವಹಾರವನ್ನು ನನ್ನ ಮಗನೇ ನಿರ್ವಹಣೆ ಮಾಡುತ್ತಿದ್ದಾನೆ ಎಂದರೆ ಸರಿ. ನನ್ನ ಮಗ ಹೇಳಿದರೆ ಸಹಿ ಮಾಡುತ್ತೇನೆ, ಅದನ್ನು ಹೊರತುಪಡಿಸಿ ಇತರೆ ವಿಚಾರಗಳ ಬಗ್ಗೆ ನನ್ನ ಮಗನಿಗೆ ಮಾಹಿತಿ ಇದೆ.

4. ಕುಬೇರಪ್ಪರವರ ಬಳಿ ಸಾಲ ಪಡೆದು ಕರಾರು ಪತ್ರವನ್ನು ಮಾಡಿಕೊಟ್ಟಿದ್ದೆವು ಎಂದರೆ ಸಾಕ್ಷಿ ನನ್ನ ಪತಿ ಮಾಡಿದ್ದರು ಎಂದು ಹೇಳುತ್ತಾರೆ. ನನ್ನ ಪತಿ ಕುಬೇಂದ್ರಪ್ಪರವರ ಬಳಿ ಹಣ ಪಡೆದು ಕರಾರು ಪತ್ರವನ್ನು ಮಾಡಿಕೊಟ್ಟಿದ್ದು, ಸದರಿ ದಾಖಲಾತಿಗೆ ನಾನು ಮತ್ತು ನನ್ನ ಅಕ್ಕ ಸಹಿ ಮಾಡಿದ್ದೆವು ಎಂದರೆ ಸಾಕ್ಷಿ ನನ್ನ ಪತಿ ಮಾಡಿಸಿದ್ದು, ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ದಾಖಲಾತಿಗೆ ನನ್ನ ಅಕ್ಕಳಾದ ವಾದಿಯನ್ನು ಕುಬೇಂದ್ರಪ್ಪರವರೆ ಕರೆದುಕೊಂಡು ಬಂದು ಸದರಿ ದಾಖಲಾತಿಗೆ ಸಹಿ ಪಡೆದುಕೊಂಡಿದ್ದರು. ಕುಬೇಂದ್ರಪ್ಪರವರು ಸದರಿ ಸ್ವತ್ತನ್ನು ಖರೀದಿಸುವ ಸಲುವಾಗಿ ಸಹಿ ಮಾಡಿಸಿಕೊಂಡಿದ್ದರು. ಸದರಿ ದಾಖಲಾತಿಯನ್ನು ದಿನಾಂಕ 02.11.2007 ರಂದು ಮಾಡಿಸಿದ್ದರು ಎಂದರೆ ಸರಿ. ಸದರಿ ದಾಖಲಾತಿಯ ಕುರಿತಾದ ರೂ.80,000/- ಹಣವನ್ನು ಯಾರು ವಿನಿಯೋಗಿಸಿಕೊಂಡರು ಎಂಬ ಬಗ್ಗೆ ನನ್ನ ಪತಿಗೆ ಗೊತ್ತು. ಆ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಪತಿ ಮೃತ ಪಟ್ಟಿರುತ್ತಾರೆ.

5. ಸದರಿ ದಾಖಲಾತಿ ಮಾಡಿಕೊಟ್ಟ 3 ವರ್ಷಗಳ ನಂತರ ನನ್ನ ಪತಿ ಮೃತಪಟ್ಟಿರುತ್ತಾರೆ. ಕುಬೇಂದ್ರಪ್ಪರವರು ನನ್ನ ಪತಿ ಮೃತಪಟ್ಟ ನಂತರ ನನ್ನ ಮತ್ತು ವಾದಿಯ ಬಳಿ ಬಂದು ಹಲವುಭಾರಿ ಜಮೀನನ್ನು ಮಾಡಿಸಿಕೊಡುವಂತೆ ಅಥವಾ ಹಣವನ್ನು ಹಿಂತಿರುಗಿಸುವಂತೆ ಕೇಳಿದ್ದರು ಎಂದರೆ ಸರಿ. ನಾವು ಹಣವನ್ನು ಹಿಂತಿರುಗಿಸದ ಕಾರಣ ಕುಬೇಂದ್ರಪ್ಪರವರು ನಮ್ಮ ವಿರುದ್ಧ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ನನ್ನ ವಕೀಲರ ಮೂಲಕ ಹಾಜರಾಗಿದ್ದೆನು ಎಂದರೆ ಸರಿ. ಸದರಿ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದ ಕುರಿತು ನನಗೆ ಮಾಹಿತಿ ಇಲ್ಲ, ಆ ಬಗ್ಗೆ ನನ್ನ ಮಗನಿಗೆ ಮಾಹಿತಿ ಇದೆ. ಸದರಿ ದಾವೆಯಲ್ಲಿ ದಾವಾ ಸ್ವತ್ತಿನ ಕುರಿತು ವಾದಿಗೆ ಹಕ್ಕು ಇಲ್ಲ ಎಂಬ ಬಗ್ಗೆ ಬರೆಸಿರುವ ಕುರಿತು ನನಗೆ ಮಾಹಿತಿ ಇಲ್ಲ. ನನ್ನ ಮಗನಿಗೆ ಮಾಹಿತಿ ಇದೆ.

6. ನಿಡಿ.1 ರ ದಾಖಲಾತಿಯನ್ನು ನನ್ನ ಮಗ ಬರೆಸಿಕೊಂಡಿರುತ್ತಾನೆ. ನನ್ನ ಮಗ ನಿಡಿ.1 ರ ದಾಖಲಾತಿಯನ್ನು ಹೊಳಲ್ಕೆರೆಗೆ ಬಂದು ಬರೆಸಿಕೊಂಡು ಬಂದಿರುತ್ತಾನೆ. ನಿಡಿ.1 ರ ದಾಖಲಾತಿಯ ಕುರಿತು ನನ್ನ ಮಗ ಈ ದಾವೆಯನ್ನು ಸಲ್ಲಿಸಿದ ನಂತರ ಹೇಳಿರುತ್ತಾನೆ. ನಿಡಿ.1 ರ ದಾಖಲಾತಿಗೆ ಈ ದಾವೆಯನ್ನು ಸಲ್ಲಿಸಿದ ನಂತರ ನನ್ನ ಬಳಿ ಸಹಿ ಮಾಡಿಸಿಕೊಂಡಿರುತ್ತಾನೆ ಎಂದರೆ ಸರಿ. ನಿಡಿ.1 ರ ದಾಖಲಾತಿಗೆ ನಾನು ಸಹಿ ಮಾಡುವ ಪೂರ್ವದಲ್ಲಿ ಬೇರೆಯವರ ಸಹಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ದಾವೆಯನ್ನು ಸಲ್ಲಿಸಿದ ನಂತರ ವಾದಿಗೆ ಹಿಸ್ಸೆ ನೀಡಬೇಕಾಗುತ್ತದೆ ಎಂದು ನನ್ನ ಮಗ ನಿಡಿ.1 ರ ದಾಖಲಾತಿಯನ್ನು ಸೃಷ್ಟಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

7. ನಿಡಿ.1 ರ ದಾಖಲಾತಿ ಜಾರಿಯಾಗಿದ್ದಲ್ಲಿ, ಕುಬೇಂದ್ರಪ್ಪರವರಿಗೆ ದಾಖಲಾತಿ ಮಾಡಿಕೊಟ್ಟಾಗ ವಾದಿಯ ಸಹಿ ಪಡೆಯುತ್ತಿರಲಿಲ್ಲ ಎಂದರೆ ಸಾಕ್ಷಿ ಕುಬೇಂದ್ರಪ್ಪರವರೆ ವಾದಿಯನ್ನು ಕರೆದುಕೊಂಡು ಬಂದು ಸಹಿ ಪಡೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಕುಬೇಂದ್ರಪ್ಪರವರು ವಾದಿಯನ್ನು ಕರೆದುಕೊಂಡು ಬಂದು ಸಹಿ ಪಡೆಯುವಾಗ ನನ್ನ ಬಳಿ ಏನೂ ಕೇಳಿಲ್ಲ. ನಿಡಿ.1 ರ ದಾಖಲಾತಿ ಜಾರಿಯಾದ ಕುರಿತು 2022 ರವರೆಗೆ ನನಗೆ ಗೊತ್ತಿರಲಿಲ್ಲ. ಖಾತೆ ಮಾಡಿಸಿಕೊಳ್ಳುವಾಗ ವಾದಿ ಬೇರೆ ಊರಿನಲ್ಲಿ ಇದ್ದು, ನಾನು ಬಂಡೆ ಬೊಮ್ಮನಹಳ್ಳಿಯಲ್ಲಿ ಇದ್ದೇನೆ ಎಂದು ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ನನ್ನ ಪತಿ ಹಾಗೂ ನನ್ನ ಮಗ ಕಂದಾಯ ಅಧಿಕಾರಿಗಳ ಬಳಿ ನಾನು ಮಾತ್ರ ಇದೇ ಊರಿನಲ್ಲಿ ಇದ್ದೇನೆ, ನನ್ನ ಅಕ್ಕ ಗುರುಬಸಮ್ಮರವರು ಬೇರೆ ಊರಿನಲ್ಲಿ ಇದ್ದಾರೆ ಎಂದು ಹೇಳಿ, ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ವಾದಿಯು ದಾವಾ ಸಲ್ಲಿಸುವ ಪೂರ್ವದಲ್ಲಿ ಭಾಗ ಕೇಳಿ ಗಲಾಟೆ ಮಾಡಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ವಾದಿ ನನ್ನ ಮಗನಿಗೆ ನಿಡಿ.1 ನ್ನು ಸೃಷ್ಠಿಸಿಕೊಂಡಿರುವ ಬಗ್ಗೆ ಬೈದರು ಎಂದರೆ ನನಗೆ ಗೊತ್ತಿಲ್ಲ. ನಿಡಿ.1 ರ ಕುರಿತು ವಾದಿ ಮತ್ತು ಆಕೆಯ ಮಕ್ಕಳು ಪಂಚಾಯಿತಿದಾರರ ಸಮಕ್ಷಮ ನನ್ನ ಮಗನ ಮೇಲೆ ಗಲಾಟೆ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ವಾದಿ ನನ್ನ ಜಮೀನನ್ನು ಬೇರೆಯವರಿಗೆ ಮಾರಿಕೊಂಡು ಹೋಗುತ್ತೇನೆ ಎಂದು ಹೇಳಿದರು ಎಂದು ಹೇಳುತ್ತಾರೆ.

8. ವಾದಿ ಆಕೆಯ ಹಿಸ್ಸೆಯ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡುವುದಾಗಿ ಹೇಳಿದಾಗ, ನನ್ನ ಮಗ ನಿ.ಡಿ.1 ರ ದಾಖಲಾತಿಯನ್ನು ತೋರಿಸಿ, ಬೇರೆಯವರಿಗೆ ಯಾವ ರೀತಿ ಮಾರಾಟ ಮಾಡುತ್ತೀರಾ ಎಂದು ಹೇಳಿರುತ್ತಾನೆ ಎಂದರೆ ಸರಿ. ಆಗ ಗ್ರಾಮಸ್ಥರು ವಾದಿಗೆ ಬೇರೆಯವರಿಗೆ ಏಕೆ ಕೊಡುತ್ತೀರಾ, ನಿಮ್ಮ ತಂಗಿಗೆ ಕೊಡಿ ಎಂದು ಹೇಳಿದರು ಎಂದರೆ ಸರಿ. ಆಗ ವಾದಿ ಹೆಚ್ಚು ಬೆಲೆಯನ್ನು ಕೇಳಿದರು ಎಂದರೆ ಸರಿ. ವಾದಿ ನನ್ನ ಬಳಿ ಹಣವನ್ನು ಪಡೆದುಕೊಂಡು ಹೋದರು. ವಾದಿ ಆಕೆಯ ಪಾಲಿನ ಹಿಸ್ಸೆಯನ್ನು ಆಕೆಯ ಹೆಸರಿಗೆ ಖಾತೆ ಮಾಡಿಸಿಕೊಡುವಂತೆ ಊರಿನ ಜನರು ಹೇಳಿದರು ಎಂದರೆ ಸರಿ. ಆಗ ನನ್ನ ಮಗ ನಮಗೆ ಕೊಡಿ ಎಂದು ಕೇಳಿದರು ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ವಾದಿ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಅವರ ಮಗನ ಮೂಲಕ ಈ ಕೇಸನ್ನು ಹಾಕಿಸಿದ್ದಾರೆ ಎಂದು ಹೇಳುತ್ತಾರೆ. ಈ ದಾವೆಯ ಕುರಿತು ನನ್ನ ಮಗನಿಗೆ ಸಂಪೂರ್ಣ ಮಾಹಿತಿ ಇದ್ದು, ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಮಗನೆ ನನಗೆ ವಕೀಲರನ್ನು ನೇಮಿಸಿಕೊಟ್ಟಿದ್ದಾನೆ ಎಂದರೆ ಸರಿ. ನನ್ನ ಮಗನೆ ಪ್ರತಿವಾದ ಪತ್ರ ಸಲ್ಲಿಸಲು ಮಾಹಿತಿ ಕೊಟ್ಟಿದ್ದಾನೆ ಎಂದರೆ ಸರಿ.

ಸಾಕ್ಷ್ಯದ ಪ್ರಮಾಣ ಪತ್ರವನ್ನು ನನ್ನ ಮಗ ತಯಾರಿಸಿದ್ದು, ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ವಾದಿಗೆ ಹಿಸ್ಸೆ ನೀಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ